**2ನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಜೆ ಎಂ ಎಫ್ ಸಿ ರವರ ನ್ಯಾಯಾಲಯ, ಪಾಂಡವಪುರ**

ಸಿ.ಸಿ. ನಂಬ್ರಃ **96/2021** ಸಿ.ಡಬ್ಲ್ಯೂಃ **1** ಪಿ.ಡಬ್ಲ್ಯೂಃ **1**

ಸಾಕ್ಷಿದಾರರ ಹೇಳಿಕೆಗಳು -

| | | |
|---|---|---|
| ಸಾಕ್ಷಿಯ ಹೆಸರು | - | ಮಹದೇವನಾಯಕ |
| ತಂದೆಯ ಹೆಸರು | - | ರಾಮನಾಯಕ |
| ವಯಸ್ಸು | - | 27 ವರ್ಷ |
| ಉದ್ಯೋಗ | - | ವ್ಯಾಪಾರ |
| ವಾಸ ಸ್ಥಳ | - | ಗೆರಸನಹಳ್ಳಿ ಗ್ರಾಮ, ಬಿಳಿಕೆರೆ ಹೋಬಳಿ, ಹುಣಸೂರು ತಾಲೂಕು. |

ದಿನಾಂಕಃ 10-07-2024 ರಂದು ಸಾಕ್ಷಿಯನ್ನು ಕರೆದು ಪ್ರಮಾಣವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆ ಮಾನ್ಯ ಎಪಿಪಿಯವರಿಂದಃ

ದಿನಾಂಕ 16.11.2020 ರಂದು ಬೆಳಿಗ್ಗೆ 8.00 ಗಂಟೆ ಸಮಯದಲ್ಲಿ ನಾನು, ಚಾಸಾ-2 ರಿಂದ 5 ಮತ್ತು ಮೃತ ಮನುಕುಮಾರ, 3 ಸ್ಕೂಟರಗಳಲ್ಲಿ ಆದಿಚುಂಚನಗಿರಿ ದೇವಸ್ಥಾನಕ್ಕೆ ಹೋಗುತ್ತಿದ್ದೇವು. ದೇವಸ್ಥಾನಕ್ಕೆ ಹೋಗಿ ದರ್ಶನ ಮುಗಿಸಿಕೊಂಡು ಮಧ್ಯಾಹ್ನ 2.00 ಗಂಟೆಗೆ ವಾಪಸು ನಮ್ಮ ಊರಿಗೆ ನಾನು ಮತ್ತು ಮನುಕುಮಾರ ಒಂದು ಸ್ಕೂಟರ ನಂಬರ ಕೆಎ-45 ಬಿ-0420 ನ್ನು ಸವಾರಿ ಮನುಕುಮಾರ ಮಾಡುತ್ತಿದ್ದು, ನಾನು ಹಿಂಬದಿ ಸವಾರನಾಗಿ ಜಕ್ಕನಹಳ್ಳಿ ಕ್ರಾಸ್ ಬಳಿ ಬರುತ್ತಿದ್ದಾಗ, ಪ್ಯಾಷನ್ ಪ್ರೋ ಬೈಕು ಒಂದು ಮೇಲುಕೋಟೆಯಿಂದ ಮಂಡ್ಯ ಕಡೆಗೆ ಬಂದು ನಾವು ಹೋಗುತ್ತಿರುವ ಸ್ಕೂಟರನ ಬಲಭಾಗಕ್ಕೆ ಡಿಕ್ಕಿಪಡಿಸಿ ಅಪಘಾತ ಮಾಡಿದ್ದು, ನಾನು ರಸ್ತೆಯ ಬದಿಯಲ್ಲಿ ಬಿದ್ದು, ಪ್ರಜ್ಞೆಯನ್ನು ಕಳೆದುಕೊಂಡಿರುತ್ತೇನೆ. ಸ್ಕೂಟರ ಸವಾರನಾದ ಮನುಕುಮಾರ ಸ್ಕೂಟರನ ಬಿದ್ದಿದ್ದರು. ನಮ್ಮ ಹಿಂದೆ ಬರುತ್ತಿದ್ದ ಚಾಸಾ-2 ಮತ್ತು 3 ರವರು ಕೂಡಲೇ ಬಂದು ನೀರು ಹಾಕಿ ನನ್ನನ್ನು ಎಬ್ಬಿಸಿದರು.

ಆಗ ನನಗೆ ಪ್ರಜ್ಞೆ ಬಂತು. ನಂತರ ಆ್ಯಂಬುಲೆನ್ಸ ಬಂದಿದ್ದು, ಮನುಕುಮಾರಗೆ ತಲೆಗೆ, ಕೈ ಕಾಲುಗಳಿಗೆ ಗಾಯಗಳಾಗಿದ್ದವು. ಸೆಂಟ್ ಜೋಸೆಫ್ ಆಸ್ಪತ್ರೆಗೆ ಆ್ಯಂಬುಲೆನ್ಸ ಮೂಲಕ ಕರೆದುಕೊಂಡು ಹೋದರು, ನನಗೆ ತರಚಿದ ಗಾಯಗಳಾಗಿತ್ತು. ಅಪಘಾತವಾದ ಸ್ಥಳಕ್ಕೆ ಪೋಲಿಸರು ಬಂದಿದ್ದು, ನಂತರ ನಾನು ಠಾಣೆಗೆ ಹೋಗಿ ದೂರನ್ನು ನೀಡಿರುತ್ತೇನೆ.

2. ಅಪಘಾತಪಡಿಸಿದ ಬೈಕಿನ ನಂಬರ ಕೆಎ-54 ಇ-1749 ಆಗಿದ್ದು, ಬೈಕನ್ನು ಆರೋಪಿ ಓಡಿಸುತ್ತಿದ್ದರು. ಆ ಬೈಕಿನಲ್ಲಿ ಮತ್ತೊಬ್ಬರು ಹಿಂಬದಿ ಸವಾರ ಇದ್ದರು, ಅಪಘಾತವಾದ ಕೂಡಲೇ ಆರೋಪಿ ಬೈಕನ್ನು ಅಲ್ಲೇ ಬಿಟ್ಟು ಓಡಿ ಹೋಗಿರುತ್ತಾರೆ. ಬೈಕನ್ನು ಆರೋಪಿ ವೇಗವಾಗಿ ಓಡಿಸಿಕೊಂಡು ಬಂದು ಅಪಘಾತ ಮಾಡಿರುತ್ತಾರೆ. ಪಾಂಡವಪುರ ಕಡೆಯಿಂದ ಟ್ರ್ಯಾಕ್ಟರ್ ಒಂದು ಬರುತಿದ್ದು, ಆರೋಪಿ ಟ್ರ್ಯಾಕ್ಟರ್ ನ್ನು ನೋಡಿ ನಮ್ಮ ಸ್ಕೂಟರಗೆ ಡಿಕ್ಕಿಪಡಿಸಿರುತ್ತಾರೆ.

3. ಸಾಕ್ಷಿ ದೂರಿನಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಸದರಿ ದೂರನ್ನು ನಿಪಿ-1 ಸಾಕ್ಷಿಯ ಸಹಿಯನ್ನು ನಿಪಿ-1 ಎ ಎಂದು ಗುರುತಿಸಲಾಯಿತು.

4. ದಿನಾಂಕ 17.11.2020 ರಂದು ಬೆಳಿಗ್ಗೆ 10 ರಿಂದ 11 ಗಂಟೆಗೆ ನಾನು ಮತ್ತು ಚಾಸಾ-2, 3 ರವರು ಸ್ಥಳವನ್ನು ತೋರಿಸಿದ್ದು, ಸದರಿ ಸ್ಥಳವನ್ನು ಪೋಲಿಸರು ಪರಿಶೀಲಿಸಿ ಮಹಜರ ಮಾಡಿರುತ್ತಾರೆ. ಮಹಜರನ್ನು ನಿಪಿ-2 ಹಾಗೂ ಸಾಕ್ಷಿಯ ಸಹಿಯನ್ನು ನಿಪಿ-2 ಎ ಎಂದು ಗುರುತಿಸಲಾಯಿತು. ಮಹಜರ ಸಮಯದಲ್ಲಿ 2 ಬೈಕುಗಳನ್ನು ಪೋಲಿಸರು ಅಮಾನತುಪಡಿಸಿಕೊಂಡಿರುತ್ತಾರೆ. ಅಪಘಾತಕ್ಕೊಳಪಟ್ಟ ಬೈಕ್ ನಂಬರ ಕೆಎ-45v-0420, ಅಪಘಾತ ಮಾಡಿರುವ ಬೈಕ್ ನಂಬರ ಕೆಎ-54 ಇ-1749 ಆಗಿರುತ್ತದೆ.

5. ಮನುಕುಮಾರವರು ಚಿಕಿತ್ಸೆ ಫಲಕಾರಿಯಾಗದೇ ಮೃತಪಟ್ಟಿರುವುದಾಗಿ ದಿನಾಂಕ 23.11.2020 ರಂದು ಮರು ದೂರನ್ನು ನೀಡಿರುತ್ತೇನೆ. ಸಾಕ್ಷಿ ಮರು ದೂರಿನಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಸದರಿ ಮರು ದೂರನ್ನು ನಿಪಿ-3 ಸಾಕ್ಷಿಯ ಸಹಿಯನ್ನು ನಿಪಿ-3 ಎ ಎಂದು ಗುರುತಿಸಲಾಯಿತು.

ಅಪಘಾತವಾದ ದಿನದಂದು ಬೈಕನ್ನು ಸವಾರಿ ಮಾಡುತ್ತಿರುವ ವ್ಯಕ್ತಿಯನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಯು ನ್ಯಾಯಾಲಯದ ಮುಂದಿರುವ ಆರೋಪಿಯನ್ನು ನೋಡಿ ಗುರುತಿಸಿದರು.

ಪಾಟಿ ಸವಾಲು ಶ್ರೀ ಎಂ ಬಿ ಎನ್ ವಕೀಲರವರಿಂದಃ

ಆದಿಚುಂಚನಗಿರಿ ದೇವಸ್ಥಾನದಿಂದ ಮಧ್ಯಾಹ್ನ 1.30-2.00 ಗಂಟೆಗೆ ಅಲ್ಲಿಂದ ಹೊರಟೆವು. ಆದಿಚುಂಚನಗಿರಿಯಿಂದ ಜಕ್ಕನಹಳ್ಳಿ ಕ್ರಾಸ್ 40 ರಿಂದ 50 ಕಿ ಮೀ ದೂರ ಇದೆಯಾ ಎಂದರೆ ಇದೆ. ಮೃತ ಮನುಕುಮಾರ ಗಾಡಿಯನ್ನು 1 ಗಂಟೆಗೆ 45 ರಿಂದ 50 ಕಿ ಮೀ ವೇಗದಲ್ಲಿ ಓಡಿಸುತ್ತಿದ್ದರು. ಆದಿಚುಂಚನಗಿರಿ ದೇವಸ್ಥಾನವನ್ನು ಬಿಟ್ಟ ನಂತರ ಮಧ್ಯದಲ್ಲಿ ಒಂದು ಸ್ಥಳದಲ್ಲಿ ಕಾಲು ಗಂಟೆ ಸಮಯ ವಾಹನವನ್ನು ನಿಲ್ಲಿಸಿರುತ್ತೇವೆ. ಆದಿಚುಂಚನಗಿರಿಯಿಂದ ಜಕ್ಕನಹಳ್ಳಿ ಕ್ರಾಸ್ ಗೆ ಬರುವ ರಸ್ತೆಯು ರಾಷ್ಟ್ರೀಯ ಹೆದ್ದಾರಿಯಾಗಿರುತ್ತದೆ ಎಂದರೆ ಸರಿ. ಆದಿಚುಂಚನಗಿರಿಯಿಂದ ಜಕ್ಕನಹಳ್ಳಿ ಕ್ರಾಸ್ ಮೊದಲು ದ್ವಿಮುಖ ರಸ್ತೆಯಾಗಿದ್ದು, ಮಧ್ಯೆ ಡಿವೈಡರ್ ಇರುವುದಿಲ್ಲ ಎಂದರೆ ಸರಿ. ಸದರಿ ರಸ್ತೆಯು ರಾಷ್ಟ್ರೀಯ ಹೆದ್ದಾರಿಯಾಗಿರುವ ಕಾರಣ ದ್ವಿಮುಖ ರಸ್ತೆಗಳಲ್ಲಿ ವಾಹನ ದಟ್ಟನೆ ಹೆಚ್ಚಾಗಿರುತ್ತದೆ ಎಂದರೆ ಸರಿ.

2. 6 ಜನ 3 ಬೈಕುಗಳಲ್ಲಿ ಹೋಗಿದ್ದೇವು. ಚಾಸಾ-4 ಮತ್ತು 5 ರವರು ನಮಗಿಂತ ಮುಂಚೆ ಹೋಗಿದ್ದು, ಚಾಸಾ-6 ಮತ್ತು ಆತನ ಸ್ನೇಹಿತ ತಿಲಕ್ ನಮಗಿಂತ ಮೊದಲೇ ಹೋಗಿರುತ್ತಾರೆ. ಚಾಸಾ-6 ಮತ್ತು ತಿಲಕ್ ನಮ್ಮ ಊರಿನಿಂದ ನಮ್ಮ ಜೊತೆ ಬಂದಿರುವುದಿಲ್ಲ. ನನ್ನ ದೂರಿನಲ್ಲಿ ತಿಲಕ್ ದೇವಸ್ತಾನಕ್ಕೆ ಬಂದಿರುವ ವಿಚಾರವನ್ನು ತಿಳಿಸಿರುವುದಿಲ್ಲ. ನಮ್ಮ ಬೈಕಿಗಿಂತ ಎಷ್ಟು ದೂರದಲ್ಲಿ ಚಾಸಾ-4, 5, 6 ರವರು ಹೋಗಿರುತ್ತಾರೆ ಎಂದು ನನಗೆ ಗೊತ್ತಿಲ, ನಮಗೆ ನಮ್ಮ ಮುಂದೆ ಹೋಗಿರುವ ಬೈಕಿನವರು ಕಾಣಿಸುತ್ತಿರಲಿಲ್ಲ.

3. ಜಕ್ಕನಹಳ್ಳಿ ಸರ್ಕಲಿಗೆ ಬಿ ಜಿ ನಗರ, ಶ್ರವಣಬೆಳಗೊಳ, ಮೇಲುಕೋಟೆಯಿಂದ, ಮಂಡ್ಯದಿಂದ, ಮೈಸೂರಿನಿಂದ ಬರುವ ವಾಹನಗಳು ಒಟ್ಟಿಗೆ ಸೇರುತ್ತವೆ ಎಂದರೆ ಸರಿ. ಜಕ್ಕನಹಳ್ಳಿ ಸರ್ಕಲಿಗೆ ಬರುವ ಹಿಂಭಾಗ ಅಂದರೆ 1 ಕಿ ಮೀ ದೂರದಿಂದ 2 ರಸ್ತೆಗಳ ನಡುವೆ ಡಿವೈಡರನ್ನು ಹಾಕಿರುತ್ತಾರೆ ಎಂದರೆ ಸರಿ. ಜಕ್ಕನಹಳ್ಳಿ ಸರ್ಕಲಿನಲ್ಲಿ ನಾಗಮಂಗಲ ಮತ್ತು ಮೈಸೂರಿಗೆ ಹೋಗುವ 2 ರಸ್ತೆಗಳು ಇರುತ್ತದೆ ಎಂದರೆ ಸರಿ.

ನಾಗಮಂಗಲದಿಂದ ಬರುವ ರಸ್ತೆಯ ಪೂರ್ವಕ್ಕೆ ಸರ್ವಿಸ್ ರಸ್ತೆ ಇದೆ ಎಂದರೆ ಸಾಕ್ಷಿ ಇರಬಹುದು. ಜಕ್ಕನಹಳ್ಳಿ ಸರ್ಕಲ್ ಬಳಿ ಗಣಪತಿ ದೇವಸ್ಥಾನ ಇದೆ ಎಂದರೆ ನಾನು ನೋಡಿರುವುದಿಲ್ಲ. ಗಣಪತಿ ದೇವಸ್ಥಾನದ ಪಕ್ಕದಲ್ಲಿ ಮೇಲುಕೋಟೆಯಿಂದ ಸರ್ಕಲಿಗೆ ಬರುವ ರಸ್ತೆ ಇರುತ್ತದೆ ಎಂದರೆ ಸರಿ. ಮೇಲುಕೋಟೆಯಿಂದ ನೇರವಾಗಿ ಮಂಡ್ಯಗೆ ಹೋಗುವ ರಸ್ತೆ ಇರುತ್ತದೆ ಎಂದರೆ ಸರಿ. ಮೇಲುಕೋಟೆಯಿಂದ ಮಂಡ್ಯಗೆ ಹೋಗುವ ರಸ್ತೆಯವರೆಗೂ 2 ರಸ್ತೆಗಳಿಗೂ ಡಿವೈಡರ್ ಇದೆ ಎಂದರೆ ಸರಿ. ಜಕ್ಕನಹಳ್ಳಿ ಸರ್ಕಲಿನಲ್ಲಿ ಮಂಡ್ಯ ರಸ್ತೆಗೆ ಹೋಗುವ ರಸ್ತೆಗಿಂತ 30 ಅಡಿ ಹಿಂದೆಯೇ ಅಪಘಾತವಾಗಿರುತ್ತದೆ ಎಂದರೆ ಸರಿ. ಅಪಘಾತವಾದ ಸ್ಥಳವು ಡಿವೈಡರ್ ಗೆ ನೇರವಾಗಿ ಇರುತ್ತದೆ ಎಂದರೆ ಸರಿ. ಮೇಲುಕೋಟೆಯಿಂದ ಬರುತ್ತಿರುವ ಗಾಡಿ ಡಿವೈಡರ್ ನ್ನು ದಾಟಿಕೊಂಡು ಅಪಘಾತವಾದ ಸ್ಥಳಕ್ಕೆ ಬರುವ ಸಾಧ್ಯತೆ ಇರುವುದಿಲ್ಲ ಎಂದರೆ ಸಾಕ್ಷಿಯು ಆರೋಪಿಯ ಗಾಡಿಯ ಪಕ್ಕದಲ್ಲಿ ಟ್ರ್ಯಾಕ್ಟರ್ ಬರುತಿತ್ತು, ಆದ್ದರಿಂದ ಆರೋಪಿ ವೇಗವಾಗಿ ಬಂದು ಅಪಘಾತ ಮಾಡಿರುತ್ತಾರೆ. ಜಕ್ಕನಹಳ್ಳಿ ಸರ್ಕಲ್ ಬಳಿ 4-5 ರಸ್ತೆಗಳು ಒಟ್ಟಿಗೆ ಸೇರಿರುವ ಕಾರಣ ವಾಹನಗಳನ್ನು ಅತಿ ವೇಗವಾಗಿ ಚಲಾಯಿಸಲು ಆಗುವುದಿಲ್ಲ ಎಂದರೆ ಸರಿಯಲ್ಲ.

5. ನಾನು ಗಾಡಿಯ ಹಿಂಬದಿ ಸವಾರನಾಗಿದ್ದು, ಮುಂದೆ ಬರುತ್ತಿರುವ ವಾಹನಗಳು ಹೇಗೆ ಬರುತ್ತವೆ ಎಂದು ಕಾಣಿಸುವುದಿಲ್ಲ ಎಂದರೆ ಸರಿ. ನಮ್ಮ ಮುಂದೆ ಹೋಗಿರುವ ನಮ್ಮ ಸ್ನೇಹಿತರ ಗಾಡಿಗಳು ಅಪಘಾತ ಸ್ಥಳಕ್ಕಿಂತ ಮುಂದೆ ಹೋಗಿರುತ್ತಾರೆ ಎಂದರೆ ಸರಿ. ನಮ್ಮ ಮುಂದೆ ಹೋಗಿರುವ ವಾಹನದ ಸವಾರರಿಗೆ ಅಪಘಾತದ ಬಗ್ಗೆ ಮಾಹಿತಿ ಇಲ್ಲ ಎಂದರೆ ನಾವು ಫೋನ್ ಮಾಡಿ ತಿಳಿಸಿರುತ್ತೇವೆ. ನಮ್ಮ ಹಿಂದೆ ಬರುತ್ತಿರುವ ಚಾಸಾ-2, 3 ರವರಿಗೆ ಅಪಘಾತದ ಬಗ್ಗೆ ಗೊತ್ತು. ನಮ್ಮ ದೂರಿನಲ್ಲಿ ನಮ್ಮ ಮುಂದೆ ಹೋಗಿರುವ ವಾಹನದ ಸವಾರರಿಗೆ ಅಪಘಾತದ ಬಗ್ಗೆ ಫೋನ್ ಮಾಡಿ ತಿಳಿಸಿರುವ ಬಗ್ಗೆ ತಿಳಿಸಿರುವುದಿಲ್ಲ. ನಾನು ಹಿಂಬದಿ ಸವಾರನಾಗಿದ್ದು, ನನಗೆ ಸಣ್ಣಪುಟ್ಟ ಗಾಯಗಳಾಗಿರುತ್ತವೆ. ನಾನು ಚಿಕಿತ್ಸೆಯನ್ನು ಪಡೆದಿರುತ್ತೇನೆ. ನಾನು ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದಿರುವ ಬಗ್ಗೆ ತನಿಖಾಧಿಕಾರಿಗಳ ಮುಂದೆ ಹೇಳಿರುವುದಿಲ್ಲ. ಅಪಘಾತವು ಮನುಕುಮಾರವರ ತಪ್ಪಿನಿಂದಲೇ ಆಗಿರುತ್ತದೆ ಹೊರತು ಆರೋಪಿಯ ತಪ್ಪಿನಿಂದಾಗಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಅಪಘಾತ ಸ್ಥಳದಲ್ಲಿ ಇರಲಿಲ್ಲ, ನಾನು ಅಪಘಾತವನ್ನು ಕಣ್ಣಾರೆ ನೋಡಿರುವುದಿಲ್ಲ ಎಂದರೆ ಸರಿಯಲ್ಲ. ಮೃತ ಮನುಕುಮಾರ ನನ್ನ ದೊಡಪ್ಪನ ಮಗ ಎಂದರೆ ಸರಿ.

ಅಪಘಾತ ಪರಿಹಾರ ಕೋರಿ ಮನುಕುಮಾರನ ಕುಟುಂಬದವರು ಮೈಸೂರು ನ್ಯಾಯಾಲಯದಲ್ಲಿ ಪ್ರಕರಣವನ್ನು ದಾಖಲಿಸಿರುತ್ತಾರೆ ಎಂದರೆ ಸರಿ. ಮೃತ ಮನುಕುಮಾರವರ ಕುಟುಬಂಕ್ಕೆ ಅಪಘಾತದ ಪರಿಹಾರ ಸಿಗಲಿ ಎಂಬ ಉದ್ದೇಶದಿಂದ ನಾನು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

7. ಬೆಳಿಗ್ಗೆ 9.00-10.00 ಗಂಟೆಗೆ ರಿಂದ ಗಂಟೆಗೆ ಮಹಜರಗೆ ಬಂದಿರುತ್ತೇವೆ, 10.00 ರಿಂದ 11.00 ಗಂಟೆಗೆ ಮಹಜರ ಮಾಡಿರತ್ತಾರೆ. ಅಪಘಾತವಾದ ಸ್ತಳದ ಸುತ್ತಲು ಆಸ್ಪತ್ರೆ, ಅಂಗಡಿ ಇವೆ ಎಂದರೆ ಸರಿ. ಮಹಜರ ಸ್ಥಳಕ್ಕೆ 4-5 ಜನ ಬಂದಿರುತ್ತಾರೆ. ಸ್ಥಳೀಯರು ಯಾರು ಮಹಜರಗೆ ಸಹಿ ಮಾಡಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ಮಹಜರನ್ನು ಅಪಘಾತದ ಸ್ಥಳದಲ್ಲಿ ತಯಾರಿಸಿರುವುದಿಲ್ಲ, ಠಾಣೆಯಲ್ಲಿ ಮಹಜರ ಮಾಡಿರುತ್ತಾರೆ, ಅದಕ್ಕೆ ನಾನು ಠಾಣೆಯಲ್ಲಿ ಸಹಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ಅಪಘಾತದ ಬಗ್ಗೆ ನನಗೇನೂ ಗೊತ್ತಿಲ್ಲದೇ ಇದ್ದರೂ ಸಹಾ ಮೃತ ಮನುಕುಮಾರವರ ಕುಟುಂಬಕ್ಕೆ ಸಹಾಯ ಮಾಡಲು ನಾನು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ

ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓದಿ ಹೇಳಿ ಕೇಳಿ ಸರಿ ಇದೆ ಎಂದರು

2 ನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಜೆ ಎಂ ಎಫ್ ಸಿ, ನ್ಯಾಯಾಲಯ, ಪಾಂಡವಪುರ